**ಅಸಲು ದಾವ ಸಂಖ್ಯೆ:294/2013**

**ಪಿ.ಡಬ್ಲ್ಯೂ -1**

ದಿಃ 14-01-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಹಿಂದಿ (ಮರಾಠಿ) ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ ಎಸ್.ಬಿ.ಪಿ ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು 4 ಮತ್ತು 5 ನೇ ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.100/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.

**ಮುಂದುವರೆದ ಪಾಟೀ ಸವಾಲು 4 ಮತ್ತು 5 ನೇ ಪ್ರತಿವಾದಿಯರ ಪರವಾಗಿ ಶ್ರೀ ಎಸ್.ಬಿ.ಡಿ. ರವರಿಂದಃ-**

**6.** 12, ಮತ್ತು 14 ರಿಂದ 16ನೇ ಪ್ರತಿವಾದಿಯರು ಶ್ರೀಪತಿ ಕುಲ್ಲಂ ರವರ ಮಕ್ಕಳು ಎಂದರೆ ಸರಿ. ಸದರಿ ಪ್ರತಿವಾದಿಗಳು ಲಕ್ಷ್ಮಿಬಾಯಿ ರವರ ಮಕ್ಕಳು ಎಂದರೆ ಸರಿ. 12ನೇ ಪ್ರತಿವಾದಿ ಮಾಲು ರವರನ್ನು ಜೀಜಾ ಎಂದೂ ಸಹ ಕರೆಯುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಪಿ-11 ರ ಪ್ರಕಾರ ದಿನಾಂಕ 08.01.1998 ರಲ್ಲಿ 6 ಖರೀದಿ ಪತ್ರಗಳು ಆಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 08.01.1998 ರಲ್ಲಿ ಯಾವುದೇ ಖರೀದಿ ಪತ್ರ ಆಗಿಲ್ಲ, ಅದೆಲ್ಲಾ ಸುಳ್ಳು. ದಿನಾಂಕ 08.01.1998 ರ ಕ್ರಯಪತ್ರವನ್ನು ರದ್ದುಪಡಿಸಬೇಕೆಂದು ಈ ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿ. ದಿನಾಂಕ 08.01.1998 ರಲ್ಲಿ ಆದಂತಹ ಎಲ್ಲಾ ಖರೀದಿ ಪತ್ರಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಮ್ಮ ಬಳಿ ಎಷ್ಟು ಇತ್ತೋ ಅವುಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-11ರ ಪ್ರಕಾರ 4 ಮತ್ತು 5ನೇ ಪ್ರತಿವಾದಿಯರ ಹೆಸರು ಉತಾರುವಿನಲ್ಲಿ ದಾಖಲಾಗಿದೆ ಎಂದರೆ ಸರಿಯಲ್ಲ. ಸದರಿಯವರ ಹೆಸರನ್ನು ಉತಾರುವಿನಲ್ಲಿ ರದ್ದುಪಡಿಸಲು ಡಿಸಿ ಮತ್ತು ಎಸಿ ನ್ಯಾಯಾಲಯದಲ್ಲಿ ಕೇಸು ಹಾಕಿಲ್ಲ.

**7.** ನಿಪಿ-17 ಖರೀದಿ ಪತ್ರವನ್ನು ನಾನು ಓದಿ ನೋಡಿರುತ್ತೇನೆ. ಸದರಿ ಕ್ರಯಪತ್ರವನ್ನು ಶ್ರೀಪತಿ ಕುಲ್ಲಂ ರವರು 4 ಮತ್ತು 5ನೇ ಪ್ರತಿವಾದಿಯರಿಗೆ ಬರೆದುಕೊಟ್ಟಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದಲ್ಲಿ ಶ್ರೀಪತಿ ಕುಲ್ಲಂ ರವರು ತನಗೆ ಹಣದ ಅವಶ್ಯಕತೆ ಇದ್ದು ಸಿಂಡಿಕೇಟ್ ಬ್ಯಾಂಕ್‌ಗೆ ಸಾಲವನ್ನು ಮರುಪಾವತಿಸುವ ಸಲುವಾಗಿ ಜಮೀನನ್ನು ಮಾರಾಟ ಮಾಡುತ್ತಿದ್ದೇನೆ ಎಂದು ಬರೆಯಿಸಿರುತ್ತಾರೆ ಎಂದರೆ ಸರಿಯಲ್ಲ. 4 ಮತ್ತು 5ನೇ ಪ್ರತಿವಾದಿಯರು ಕೊಟ್ಟಂತಹ ಹಣವನ್ನು ಸಿಂಡಿಕೇಟ್ ಬ್ಯಾಂಕಿನ ಸಾಲವನ್ನು ತೀರಿಸಲು ಕೊಟ್ಟಿರುತ್ತೇನೆ ಎಂದೂ ಸಹ ಸದರಿ ಕ್ರಯಪತ್ರದಲ್ಲಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಪ್ರಕಾರ ಶ್ರೀಪತಿ ಕುಲ್ಲಂ ರವರು 28 ಗುಂಟೆ ಜಮೀನನ್ನು 4 ಮತ್ತು 5ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 08.01.1998 ರಂದು ಸದರಿ 28 ಗುಂಟೆ ಜಮೀನಿನ ಕಬ್ಜೆಯನ್ನೂ ಸಹ 4 ಮತ್ತು 5ನೇ ಪ್ರತಿವಾದಿಯರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಪ್ರಕಾರ 4 ಮತ್ತು 5ನೇ ಪ್ರತಿವಾದಿಯರು 17,500/- ರೂಗಳನ್ನು ಶ್ರೀಪತಿ ಕುಲ್ಲಂ ರವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈ ದಾವೆಯನ್ನು ಸಲ್ಲಿಸುವುದಕ್ಕಿಂತ ಮುಂಚೆ ತೆಗೆದುಕೊಂಡಿರುತ್ತೇನೆ. ಆ ರೀತಿ ದಾವೆ ಸಲ್ಲಿಸುವುದಕ್ಕಿಂತ ಮುಂಚೆ ದಾಖಲೆಗಳನ್ನು ತೆಗೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ಮತ್ತು

5 ನೇ ಪ್ರತಿವಾದಿಯರ ಹೆಸರಿನಲ್ಲಿರುವ ಕ್ರಯಪತ್ರದ ದೃಡೀಕೃತ ನಕಲನ್ನು ನಾನು ಒಂದೇ ಸಲ ತೆಗೆದುಕೊಂಡಿರುತ್ತೇನೆ. ಅವರ ಹೆಸರಿನಲ್ಲಿರುವ ಖರೀದಿ ಪತ್ರವನ್ನು ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ನೋಡಿರುತ್ತೇನೆ.

**8.** ಒಟ್ಟು ವಿಸ್ತೀರ್ಣ 9 ಎಕರೆ 10 ಗುಂಟೆ ಜಮೀನಿಗೆ ಸಂಬಂಧಿಸಿದ ಉತಾರುವನ್ನು 2013 ರಲ್ಲಿ ತೆಗೆದುಕೊಂಡಿರುತ್ತೇನೆ. ಸದರಿ ಖರೀದಿ ಪತ್ರದ ಪ್ರಕಾರ ಶ್ರೀಪತಿ ಕುಲ್ಲಂ ರವರು ಪಡೆದಂತಹ 17,500/- ರೂಗಳನ್ನು ದಿನಾಂಕ 09.01.1998 ರಂದು ಸಿಂಡಿಕೇಟ್ ಬ್ಯಾಂಕಿಗೆ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರವನ್ನು ನೋಡಿ ಓದಿ ತಿಳಿದುಕೊಂಡ ನಂತರ ಶ್ರೀಪತಿ ಕುಲ್ಲಂ ರವರಿಗೆ ಸಿಂಡಿಕೇಟ್ ಬ್ಯಾಂಕಿನಲ್ಲಿ ಎಷ್ಟು ಸಾಲ ಇದೆ ಎಂದು ನಾನು ವಿಚಾರಿಸಿಲ್ಲ. ದಿನಾಂಕ 08.01.1998 ರಂದು ಸದರಿ ಸಿಂಡಿಕೇಟ್ ಬ್ಯಾಂಕಿಗೆ ಹೋಗಿ ಶ್ರೀಪತಿ ಕುಲ್ಲಂ ರವರು ಕಟ್ಟಬೇಕಾದ ಬಾಕಿ ಸಾಲ ಎಷ್ಟು ಇದೆ ಎಂದು ನೋಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ಬ್ಯಾಂಕಿಗೇ ಹೋಗಿಲ್ಲ ಎಂದು ನುಡಿಯುತ್ತಾರೆ. ಶ್ರೀಪತಿ ಕುಲ್ಲಂ ರವರು ಸದರಿ ಬ್ಯಾಂಕಿನಲ್ಲಿ ಎಷ್ಟು ಸಾಲವನ್ನು ತುಂಬಿರುತ್ತಾರೆ ಎಂದು ವಿಚಾರಣೆ ಮಾಡಲು ನನಗೇನು ತೊಂದರೆ ಇಲ್ಲ.

**9.** ಬಾಕನೂರು ಗ್ರಾಮವು ಸಣ್ಣ ಗ್ರಾಮ ಎಂದರೆ ಸರಿ. ದಾವಾ ಆಸ್ತಿಯನ್ನು ಬಿಟ್ಟು ಒಂದು ಮನೆಯ ನಂತರ 4 ಮತ್ತು 5 ನೇ ಪ್ರತಿವಾದಿಯರ ಮನೆ ಇದೆ ಎಂದರೆ ಸರಿ. ಸದರಿ ಖರೀದಿ ಪತ್ರಕ್ಕೆ ಸಾಕ್ಷಿದಾರರಾಗಿ ಟಿ.ಎನ್.ಪಾಟೀಲ್ ಮತ್ತು ಭೀಮಣ್ಣ ಧನು ಹಸ್ಬೆ ಎನ್ನುವವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿದಾರರು ಬಾಕನೂರು ಊರಿನವರು ಎಂದರೆ ಸರಿ. ಸದರಿಯವರಿಬ್ಬರ ಮನೆ 4 ಮತ್ತು 5 ನೇ ಪ್ರತಿವಾದಿಯರ ಮನೆಯನ್ನು ಬಿಟ್ಟು 4-5 ಮನೆಯ ನಂತರ ಇದೆ ಎಂದರೆ ಸಾಕ್ಷಿಯು 7-8 ಮನೆಯ ನಂತರ ಇದೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರವನ್ನು ಓದಿದ ನಂತರ ಸದರಿ ಸಾಕ್ಷಿದಾರರನ್ನು ಖರೀದಿ ಪತ್ರದ ಬಗ್ಗೆ ವಿಚಾರಿಸಿಲ್ಲ. ಅವರನ್ನು ವಿಚಾರಣೆ ಮಾಡಲು ನನಗೇನು ತೊಂದರೆ ಇಲ್ಲ. ಶ್ರೀಪತಿ ಕುಲ್ಲಂ ರವರು ಕೂಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ಶ್ರೀಪತಿ ಕುಲ್ಲಂ ರವರಿಗೆ ಬೇರೆ ಆಸ್ತಿ ಇದೆಯಾ ಇಲ್ಲವಾ ಎಂದು ನನಗೆ ಮಾಹಿತಿ ಇಲ್ಲ. ಶ್ರೀಪತಿ ಕುಲ್ಲಂ ರವರು ಫಾರಂ ನಂ.7 ನ್ನು ತುಂಬಿರುವ ಪ್ರತಿಯನ್ನು ನಾನು ನೋಡಿಲ್ಲ. ಸದರಿ ಫಾರಂ ನ್ನು ಒಟ್ಟು ಕುಟುಂಬದ ಅವಶ್ಯಕತೆಗಾಗಿ ಶ್ರೀಪತಿ ಕುಲ್ಲಂ ರವರು ತುಂಬಿಲ್ಲ ಎಂದರೆ ಸರಿಯಲ್ಲ. ಶ್ರೀಪತಿ ಕುಲ್ಲಂ ರವರು ನನ್ನ ಮುಂದೆ ಯಾವತ್ತೂ ಹೆಬ್ಬೆಟ್ಟಿನ ಗುರುತನ್ನು ಹಾಕಿಲ್ಲ. ಶ್ರೀಪತಿ ಕುಲ್ಲಂ ರವರು ಸಹಿಯನ್ನು ಮಾಡುತ್ತಿದರು ಎಂದರೆ ಸರಿಯಲ್ಲ. ಅವರು ಫಾರಂ ನಂ.7 ರಲ್ಲಿ ಸಹಿಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ

ಮುಂದೆ ಅವರು ಸಹಿಯನ್ನು ಮಾಡಿಲ್ಲ ಎಂದು ನುಡಿಯುತ್ತಾರೆ. ಶ್ರೀಪತಿ ಕುಲ್ಲಂ ರವರು ತನ್ನ ಸ್ವಂತಕ್ಕಾಗಿ ಟ್ರಿಬ್ಯುನಲ್‌ಗೆ ಫಾರಂ ನಂ.7 ನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಫಾರಂ ನಂ.7 ರಲ್ಲಿ ಶ್ರೀಪತಿ ಕುಲ್ಲಂ ರವರು ಕುಟುಂಬದ ಸದಸ್ಯರ ಹೆಸರುಗಳನ್ನು ಹಾಕಿಲ್ಲ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿಯುತ್ತಾರೆ.

**10.** ದಾವಾ ಆಸ್ತಿಯು ಶ್ರೀಪತಿ ಕುಲ್ಲಂ ರವರ ಕುಟುಂಬದ ಪರವಾಗಿ ಮಂಜೂರಾಗಿರುತ್ತದೆ ಎಂದು ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು, 2 ನೇ ವಾದಿ ಮತ್ತು 1 ನೇ ಪ್ರತಿವಾದಿಯರು ಶ್ರೀಪತಿ ಕುಲ್ಲಂ ರವರ ಕುಟುಂಬದ ಸದಸ್ಯರಲ್ಲ ಎಂದರೆ ಸರಿಯಲ್ಲ. ದಿನಾಂಕ 08.01.1998 ರಂದು ಶ್ರೀಪತಿ ಕುಲ್ಲಂ ರವರ ಹೆಸರಿನಲ್ಲಿ ಸಿಂಡಿಕೇಟ್ ಬ್ಯಾಂಕಿನಲ್ಲಿ 20,000/- ರೂಗಳು ಸಾಲ ಬಾಕಿ ಇತ್ತು ಎಂದರೆ ಸರಿಯಲ್ಲ. ಸದರಿ ಬ್ಯಾಂಕಿನ ಸಾಲವನ್ನು ತುಂಬಲು 28 ಗುಂಟೆ ಜಮೀನನ್ನು 4 ಮತ್ತು 5 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆದ ಕಾರಣ ಶ್ರೀಪತಿ ಕುಲ್ಲಂ ರವರಿಗಾಗಲೀ ಅವರ ವಾರಸುದಾರರಿಗಾಗಲೀ ಸದರಿ ಕ್ರಯಪತ್ರವನ್ನು ರದ್ದುಗೊಳಿಸಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ 1 ನೇ ವಾದಿ ಮತ್ತು 1 ನೇ ಪ್ರತಿವಾದಿ ಶ್ರೀಪತಿ ಕುಲ್ಲಂ ರವರ ಮಕ್ಕಳು ಹಾಗೂ 2 ನೇ ವಾದಿ ಆತನ ಹೆಂಡತಿ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ 4 ಮತ್ತು 5 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುವ ಆಸ್ತಿಯಲ್ಲಿ ನಮಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. 100 ವರ್ಷಗಳಿಂದ ಗೌಡು ಕುಲ್ಲಂ ರವರು ಸಾಗುವಳಿ ಮಾಡುತ್ತಿದ್ದರು ಎಂದು ಹೇಳಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. 4 ಮತ್ತು 5 ನೇ ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ 4 ಮತ್ತು 5 ನೇ ಪ್ರತಿವಾದಿಯರಿಗೆ ಆಸ್ತಿಯನ್ನು ಮಾರಾಟ ಮಾಡಿಲ್ಲ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

**13 ರಿಂದ 16 ನೇ ಪ್ರತಿವಾದಿಯರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಕಾಲವಕಾಶವನ್ನು ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**